i) ಸಂಗಮೇಶ್ವರ ದೇವಾಲಯದ ಗರ್ಭಗುಡಿಯನ್ನು, ಮೂಲ ಲಿಂಗಕ್ಕೆ ಧಕ್ಕೆಯಾಗದಂತೆ, ಆಧುನಿಕ ತಂತ್ರಜ್ಞಾನದಿಂದ ಭದ್ರಪಡಿಸಬೇಕು.

ii) ಈಗಾಗಲೇ ಬಿಚ್ಚಲಾಗಿರುವ ದೇವಾಲಯದ ಪ್ರಾಕಾರವನ್ನು, ಅದೇ ಸ್ಥಳದಲ್ಲಿ ಮೊದಲಿನ ರೂಪದಲ್ಲೇ ತಾಂತ್ರಿಕ ಸುಧಾರಣೆಯೊಂದಿಗೆ ಪುನರ್ನಿರ್ಮಾಣ ಮಾಡಬೇಕು.

iii) ಅಂತರರಾಷ್ಟ್ರೀಯ ಬಸವ ಕೇಂದ್ರವನ್ನು ಸ್ಥಾಪಿಸಬೇಕು.

iv) ಉದ್ದೇಶಿತ ಸಂಕೀರ್ಣಕ್ಕಾಗಿ ಈಗಾಗಲೇ ವಶಪಡಿಸಿಕೊಳ್ಳಲಾಗಿರುವ 102 ಎಕರೆ ಭೂಮಿಯ ಜೊತೆಗೆ ಇನ್ನೂ 300 ಎಕರೆ ಭೂಮಿ ವಶಪಡಿಸಿಕೊಳ್ಳಬೇಕು.

v) ಕೂಡಲ ಸಂಗಮ ಕ್ಷೇತ್ರವನ್ನು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಬೇಕು.

vi) ಸಂಕೀರ್ಣದಲ್ಲಿ, ಅಂತರ ರಾಷ್ಟ್ರೀಯ ಬಸವ ಸ್ಮಾರಕ, ಗ್ರಂಥಾಲಯ. ವಾಚನಾಲಯ, ಶ್ರವಣ - ದೃಶ್ಯ ವಿಭಾಗ, ವಚನ ಸಾಹಿತ್ಯ ಸಂಶೋಧನಾ ಕೇಂದ್ರ, ಆಡಳಿತ ಕಾರ್ಯಾಲಯ ಬಯಲು ರಂಗ ಮಂದಿರ, ಅನುಭವ ಮಂಟಪ, ಪ್ರವಾಸಿ ಗೃಹ, ಯಾತ್ರಿಕ ನಿಲಯ ಹಾಗೂ ಛತ್ರಗಳು, ಡಾರ್ಮಿಟರಿಗಳು ವಾಣಿಜ್ಯ ಸಂಕೀರ್ಣ, ಪ್ರಾರ್ಥನಾ ಮಂದಿರ, ಕಾಯಕ ಕೇಂದ್ರ, ಕಿರು ವಿಮಾನ ನಿಲ್ದಾಣ, ಚಿಕಿತ್ಸಾಲಯ, ಶಾಲೆಗಳು ಯೋಗಮಂದಿರ ಪ್ರಕಟಣಾ ವಿಭಾಗ, ಸುರಕ್ಷಿತ ಕುಡಿಯುವ ನೀರು ಸರಬರಾಜು, ಶೌಚಾಲಯ, ಸ್ನಾನ ಗೃಹಗಳು, ಮತ್ತು ಸೂಕ್ತ ಒಳಚರಂಡಿ ವ್ಯವಸ್ಥೆ. ಇವುಗಳನ್ನು ಒದಗಿಸಬೇಕು.

ಆ) ಸಂಗಮ ಸಂಕೀರ್ಣದ ನೀಲಿ ನಕಾಶೆಗೆ ಸರ್ಕಾರವು ದಿನಾಂಕ 19.7.1989ರ ಆದೇಶದಲ್ಲಿ ಈಗಾಗಲೇ ಅನುಮೋದನೆ ನೀಡಿದೆ. ಸಂಕೀರ್ಣದ ಅಭಿವೃದ್ಧಿಯ ಅಂದಾಜು ವೆಚ್ಚ 1988-89ರ ದರಗಳ ಮೇರೆಗೆ ಸುಮಾರು 13.82 ಕೋಟಿ ರೂ. ಗಳಾಗುತ್ತದೆ.

ಇ) ಈ ವಿಷಯವು ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಯ ವರದಿಯಲ್ಲಿ ಚರ್ಚಿಸಲ್ಪಟ್ಟಿಲ್ಲ, ಮತ್ತು ಇದರ ಬಗ್ಗೆ ಸರ್ಕಾರದ ಮುಂದೆ ಸದ್ಯಕ್ಕೆ ಯಾವ ಪ್ರಸ್ತಾವನೆಯೂ ಇರುವುದಿಲ್ಲ.

ಈ)

i) ಸಂಗಮೇಶ್ವರ ದೇವಾಲಯದ ಬುನಾದಿಯನ್ನು ಭದ್ರಗೊಳಿಸಲು ಮತ್ತು ಪ್ರಾಕಾರವನ್ನು ಪುನರ್ರಚಿಸಲು ರೂಕ್ರಿಯ ಕೇಂದ್ರೀಯ ಕಟ್ಟಡ ಸಂಶೋಧನಾ ಸಂಸ್ಥೆಯು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದು, ಅವು ಪರಿಶೀಲನೆಯಲ್ಲಿವೆ.

ii) ಸಂಕೀರ್ಣದ ಕಟ್ಟಡಗಳ ನಕ್ಷೆಗಳನ್ನು ತಯಾರಿಸಲು ಮುಖ್ಯ ವಾಸ್ತು ಶಿಲ್ಪಿಯವರಿಗೆ ವಹಿಸಲಾಗಿದೆ.

iii) ಸಂಕೀರ್ಣದ ಅಭಿವೃದ್ಧಿಗೆ ಬೇಕಾದ ಉಳಿದ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯ ಪ್ರಕಾರ ಈಗಾಗಲೇ ನೋಟೀಫಿಕೇಶನ್ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕುರಿತು

280 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲು ಯಾವ ಯಾವ ಕ್ರಮವನ್ನು ಕೈಗೊಂಡಿರುವರು?

ಆ) ಈಗ ಅದು ಯಾವ ಹಂತದಲ್ಲಿದೆ?

ಇ) ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೇಂದ್ರ ಸರ್ಕಾರದವರೇ ಸ್ಥಾಪಿಸುವರೇ ಅಥವಾ ರಾಜ್ಯ ಸರ್ಕಾರದವರು ಹಾಗೂ ಕೇಂದ್ರ ಮತ್ತು ಖಾಸಗಿ ಜನರ ಸಹಾಯದಿಂದ ಸ್ಥಾಪಿಸುವ ವಿಚಾರವಿದೆಯೇ ಹಾಗಿದ್ದಲ್ಲಿ, ಅದು ಯಾವ ಹಂತದಲ್ಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕಳೆದ 20 ವರ್ಷಗಳಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಸಾರ್ವಜನಿಕ ಉದ್ದಿಮೆಯಡಿಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಬಳ್ಳಾರಿ ಹೊಸಪೇಟೆ ಸ್ಥಳದಲ್ಲಿ ಸ್ಥಾಪಿಸಲು ಬಹಳ ಸಾರಿ ಮನವಿಯನ್ನು ಮಾಡಿಕೊಂಡಿತ್ತು. ಈ ವಿಷಯವಾಗಿ ಲೋಕಸಭೆಯಲ್ಲೂ ಕೂಡ ಚರ್ಚಿಸಲಾಗಿತ್ತು. ಕೇಂದ್ರ ಸರ್ಕಾರವು ಈ ಯೋಜನೆಯನ್ನು ಕಾರ್ಯಗತಗೊಳಿಸುವುದಾಗಿ ಭರವಸೆಯನ್ನು ನೀಡುತ್ತಾ ಬಂದಿತ್ತು.

ಆ) ಇತ್ತೀಚೆಗೆ ಕೇಂದ್ರ ಸರ್ಕಾರವು ಉಕ್ಕು ಉತ್ಪಾದನೆ ಬಗ್ಗೆ ನೀತಿಯನ್ನು ಸಡಿಲಿಸಿದ್ದು ಒಗ್ಗಟಿತ ಉಕ್ಕು ತಯಾರಿಸುವ ಘಟಕಗಳನ್ನು ಖಾಸಗಿ ಹಾಗೂ ಜಂಟೀ ವಲಯದಲ್ಲಿ ಸ್ಥಾಪಿಸಲು ಸೂಚಿಸಿತು. ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಮೇಲಿನ ನೀತಿಯನ್ನು ಅನುಸರಿಸಿ ಎಸ್ಸಾರ್ ಗುಜರಾತ್ ನಿಯಮಿತ ಸಂಸ್ಥೆಯನ್ನು ಆಯ್ಕೆ ಮಾಡಿ ಈ ಘಟಕವನ್ನು ಜಂಟೀ ವಲಯದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ವಿಜಯನಗರ ಉಕ್ಕು ಕಾರ್ಖಾನೆಯು ಜಂಟೀ ವಲಯದಲ್ಲಿ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ ನಿಯಮಿತದ ಮುಖಾಂತರ ಹಾಗೂ ಎಸ್ಸಾರ್ ಗುಜರಾತ್ ಲಿಮಿಟೆಡ್ ರವರ ಸಹಯೋಗದೊಂದಿಗೆ ಸ್ಥಾಪಿಸಲಾಗುವುದು.

ಅರಸೀಕೆರೆ ತಾಲ್ಲೂಕಿನ ವಿದ್ಯುಚ್ಛಕ್ತಿ ಇಲಾಖೆಯ ಗುರಿ ಮತ್ತು ಸಾಧನೆ.

252 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಅರಸೀಕರೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ವಿಭಾಗದಲ್ಲಿ ಕೃಷಿ ಭಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ನಿಗಧಿಪಡಿಸಿರುವ ಗುರಿ ಎಷ್ಟು?

ಆ) ಫೆಬ್ರವರಿ 28. 1991 ರವರೆವಿಗೆ ಸಾಧಿಸಿರುವ ಗುರಿ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) 1990-91ನೇ ಸಾಲಿಗೆ ಈ ತಾಲ್ಲೂಕಿನಲ್ಲಿ 850 ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಗುರಿ ಹಾಕಿಕೊಳ್ಳಲಾಗಿದೆ.

ಆ) ಈ ಗುರಿ ಪೈಕಿ ಫೆಬ್ರವರಿ 1991ರ ಅಂತ್ಯದವರೆಗೆ 425 ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಜಂಟಿವಲಯದಲ್ಲಿ ಸ್ಥಾಪಿಸಲಾದ ವಿಜಯನಗರ ಉಕ್ಕಿನ ಕಾರ್ಖಾನೆಗೆ ಕೇಂದ್ರದಿಂದ ನೀಡಲಾಗಿರುವ ಹಣದ ಬಗ್ಗೆ

247-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?